ಬೀಳುತ್ತವೆಯೋ ಅಥವಾ ಕೆಡವಿದಾಗ ಅಲ್ಲಿ ಜಾಸ್ತಿ ತೆಂಗಿನ ಮರಗಳು ಇಲ್ಲದಿರುವುದರಿಂದ ಹೆಚ್ಚು ಕಾಯಿಗಳು ಅಲ್ಲಿ ದೊರೆಯದೇ ಇರುವುದರಿಂದ ಪ್ರತಿದಿನ ಅಥವಾ ನಾಲ್ಕು ದಿನಕ್ಕೆ ಒಂದು ಸಾರಿ, ಎಂಟು ದಿನಕ್ಕೊಂದು ಸಾರಿ ಅಂಗಡಿಗಳಿಗೆ ಮಾರಿಬಿಡಬಹುದು ಎನ್ನತಕ್ಕಂಥ ಪರಿಸ್ಥಿತಿ ಇದೆ. ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಮಾತನಾಡಿ ಅವರಿಗೆ ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಎಷ್ಟೇ ದಿನವಾಗಲಿ ತೆಂಗಿನ ಕಾಯಿಗಳನ್ನು ಕೆಡವಿದ ಮೇಲೆ ಕನಿಷ್ಠ ಪಕ್ಷ 100 ಕಾಯಿಯಾದರೂ ಕೂಡ ಒಂದೇ ದಿನ ಹರಾಜು ಮಾಡಿದರೆ ಪರವಾಗಿಲ್ಲ, ಅದರಿಂದ ಸ್ವಲ್ಪ ಹಣಬರಬಹುದು. ಈಗ ಅವರು ನಡೆಸುತ್ತಿರುವ ಪದ್ಧತಿಯಲ್ಲಿ ಒಂದು ತೆಂಗಿನ ಕಾಯಿಗೆ 3 ರೂಪಾಯಿ ಬೆಲೆ ಬೀಳುತ್ತದೆ. ಈ ಲೆಕ್ಕದ ಪ್ರಕಾರ ಹರಾಜು ಮಾಡುತ್ತಿದ್ದಾರೆ. ಕೊನೇಪಕ್ಷ 100–200 ತೆಂಗಿನ ಕಾಯಿಗಳು ಬಂದಾಗ ಮಾತ್ರ ಹರಾಜು ಮಾಡಬೇಕೆಂದು ನಾನು ಅವರಿಗೆ ಸಲಹೆ ಕೊಟ್ಟಿದ್ದೇನೆ. ಈ ರೀತಿ ಮಾಡಿದರೆ ಹೆಚ್ಚು ಹಣ ಬರುತ್ತದೆ. ಇನ್ನು ಉಳಿದ ಹಣ್ಣುಗಳಿಗೆ ಮಾರ್ಕೆಟಿನಲ್ಲಿ ಒಂದೇ ರೀತಿಯ ರೇಟು ಇರುವುದಿಲ್ಲ. ರೇಟು ಒಂದು ದಿವಸ ಜಾಸ್ತಿಯಾಗುತ್ತದೆ, ಇನ್ನೊಂದು ದಿವಸ ಕಡಿಮೆಯಾಗುತ್ತದೆ. ಒಟ್ಟಿನಲ್ಲಿ ಹರಾಜು ಮಾಡಿದ ಹಣ್ಣಿನಿಂದ ಬರತಕ್ಕ ಹಣದಲ್ಲಿ ಹೆಚ್ಚು ವ್ಯತ್ಯಾಸವೇನೂ ಇಲ್ಲ. ತೆಂಗಿನಕಾಯಿಯಲ್ಲಿ ವ್ಯತ್ಯಾಸ ಬರುತ್ತದೆ. ಆದ್ದರಿಂದ ನಾನು ಅವರಿಗೆ ಒಂದು ಸಲಹೆಯನ್ನು ಕೊಟ್ಟು ಇನ್ನು ಮುಂದೆ ಎಲ್ಲ ಕಾಯಿಗಳನ್ನೂ ಒಟ್ಟಿಗೆ ಸಂಗ್ರಹಿಸಿ ಹರಾಜು ಮಾಡಬೇಕೆಂದು ಹೇಳಿದ್ದೇನೆ. ಅದರ ಪ್ರಕಾರ ಮಾಡಿದರೆ 1990–91ನೇ ಸಾಲಿನಲ್ಲಿ ಬಂದಿರುವ ಆದಾಯಕ್ಕಿಂತ ಹೆಚ್ಚಿಗೆ ಆದಾಯ ಬರುತ್ತದೆಂದು ನನ್ನ ಉತ್ತರ.

ಶ್ರೀ ಆಂಜನಮೂರ್ತಿ:– ಅಲ್ಲಿ ಎಷ್ಟು ತೆಂಗಿನ ಸಸಿಗಳಿವೆ, ಎಷ್ಟು ಸಪೋಟ ಗಿಡಗಳಿವೆ, ಎಷ್ಟು ಸೀಬೆ ಗಿಡಗಳಿವೆ ಎಂಬುದನ್ನು ಪರೀಕ್ಷೆ ಮಾಡಿದ್ದಾರೆಯೇ ಎಂಬುದನ್ನು ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಅಲ್ಲಿ ಎಷ್ಟು ಸಪೋಟ ಗಿಡಗಳಿವೆ, ಎಷ್ಟು ಸೀಬೆಗಿಡಗಳಿವೆ, ಎಂಬುದನ್ನು ನಾನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ. ಗಿಡದಲ್ಲಿ ಕಾಯಿಗಳು ಇದ್ದಾಗಲೇ ಹರಾಜು ಮಾಡುತ್ತಾರೆ. ಯಾರು ಹೆಚ್ಚು ಹರಾಜು ಕೂಗುತ್ತಾರೆ ಎಂಬುದರ ಮೇಲೆ ಇದು ತೀರ್ಮಾನ ಆಗುತ್ತದೆಯೇ ಹೊರತು ಅಲ್ಲಿ ಎಷ್ಟು ಗಿಡಗಳಿವೆ, ಎಷ್ಟು ಕಾಯಿ ಬಿಡುತ್ತವೆ ಎಂಬುದರ ಮೇಲೆ ನಾವು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಉಪಾಧ್ಯಕ್ಷಿಣಿಯವರು:– ರಾಮಯ್ಯನವರೇ ನಿಮ್ಮ 245ನೇ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದೇನೆ. ಇಲಾಖೆಯಿಂದ ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. ಆದ್ದರಿಂದ ಈ ನಿಮ್ಮ ಪ್ರಶ್ನೆಯನ್ನು ಮುಂದೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ:– ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಪ್ರಶ್ನೆಯ ಬಗ್ಗೆ ಮಾನ್ಯ ಸದಸ್ಯರ ಜೊತೆಗೆ ಮತ್ತು ಮಾನ್ಯ ವಿರೋಧಪಕ್ಷದ ನಾಯಕರ ಜೊತೆಗೆ ನಾನು ಮಾತನಾಡಿದ್ದೇನೆ. ಇದರ ಬಗ್ಗೆ ಅವರ ಜೊತೆ ಪ್ರತ್ಯೇಕವಾಗಿ ಸಮಾಲೋಚನೆ ಮಾಡಿ ಅವರ ಸಲಹೆಯನ್ನು ತೆಗೆದುಕೊಂಡು ಅನಂತರ ಉತ್ತರ ಕೊಡುತ್ತೇನೆ.

ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳು ಸಂಖ್ಯೆ

(309) ಶ್ರೀ ಸಿ. ಬೈರೇಗೌಡ (ವೇಮಗಲ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿರುವ ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆ ಎಷ್ಟು ಮತ್ತು ಮೇಲ್ಕಂಡ ಸಾರ್ವಜನಿಕ ಉದ್ದಿಮೆಗಳ ಮೇಲೆ ಹೂಡಿರುವ ಬಂಡವಾಳವೆಷ್ಟು ?

ಅ) ಕಳೆದ 3 ವರ್ಷಗಳಲ್ಲಿ ಈ ಸಾರ್ವಜನಿಕ ಉದ್ದಿಮೆಗಳು ಬ್ಯಾಂಕ್‌ಗಳಿಂದ ಇತರ ಹಣಕಾಸು ಸಂಸ್ಥೆಗಳಿಂದ ಪಡೆದುಕೊಡಿರುವ ಸಾಲದ ಮೊತ್ತವೆಷ್ಟು (ಪ್ರತಿಯೊಂದು ಸಾರ್ವಜನಿಕ ಉದ್ದಿಮೆಗಳ ಆಸ್ತಿಪಾಸ್ತಿಗಳ ಮೌಲ್ಯ ಹಾಗೂ ಅವುಗಳ ಸಾಲದ ವಿವರ ಒದಗಿಸುವುದು)

ಇ) ಹಲವು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯವರಿಗೆ ಬಿಟ್ಟು ಕೊಡಲು ಸರ್ಕಾರ ಯೋಚಿಸುತ್ತಿರುವುದು ನಿಜವೆ ?

ಈ) ಹಾಗಿದ್ದಲ್ಲಿ ಅಂತಹ ಸಾರ್ವಜನಿಕ ಉದ್ದಮೆಗಳಾವುವು ಮತ್ತು ಅದಕ್ಕೆ ಕಾರಣಗಳೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಮಹೋದ್ಯಮದ ಅಡಿಯಲ್ಲಿ 1990–91ನೇ ಸಾಲಿನ ಅಂತ್ಯದವರೆವಿಗೆ 61 ಉದ್ಯಮಗಳು ಇವೆ. ಇವುಗಳ ಮೇಲೆ ಹೂಡಿದ ಒಟ್ಟು ಬಂಡವಾಳ 4513.04 ಕೋಟಿ ರೂಪಾಯಿಗಳು.

ಆ) ಉದ್ಯಮವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಪ್ರಸ್ತುತವಾಗಿ ಯಾವುದೂ ಇಲ್ಲ.

ಈ) ಅನ್ವಯಿಸುವುದಿಲ್ಲ.

ಅನುಬಂಧ ANNEXURE

ವಿಧಾನಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 309
Legislature Assembly Starred Qn No. 309
ಸಾರ್ವಜನಿಕ ಉದ್ಯಮವಾರು ಬಳಸಿದ ಸಾಲಗಳು ಮತ್ತು ನಿವ್ವಳ ಸ್ಥಿರ ಆಸ್ತಿಗಳ ಮೌಲ್ಯ–
1989ರಿಂದ 1991ರವರೆಗೆ - Loan availed and value of Net Fixed Assets created by Public Sector Enterprises -1989 to 1991

(ರೂಪಾಯಿ ಲಕ್ಷದಲ್ಲಿ: Rs. in Lakh)

ಕ್ರ. ಸಂ.	ಉದ್ಯಮದ ಹೆಸರು Name of the enterprise	ಮಾರ್ಚ್ ತಿಂಗಳ ಅಂತ್ಯದವರೆಗಿನ ಸಾಲಗಳು Loan at the end of March			ಮಾರ್ಚ್ ತಿಂಗಳ ಅಂತ್ಯದವರೆವಿಗಿನ ನಿವ್ವಳ ಸ್ಥಿರ ಆಸ್ತಿ Net Fixed Assets as at end of March		
		1989	1990	1991	1989	1990	1991
1	2	3	4	5	6	7	8
1. ಅಭಿವೃದ್ಧಿ ಶೀಲ ಉದ್ಯಮಗಳು (Development Enterprises)							
1.	ಕರ್ನಾಟಕ ಗೋಡಂಬಿ ಅಭಿವೃದ್ಧಿ ನಿಗಮ ನಿಯಮಿತ Kar. Cashew Development Corporation Ltd.	538.06	666.38	948.88	629.81	627.33	626.51

1	3	4	5	6	7	8
2. ಕರ್ನಾಟಕ ಕಾಂಪೋಸ್ಟ್ ಗೊಬ್ಬರ ಅಭಿವೃದ್ಧಿ ನಿಗಮ ನಿಯಮಿತ Kar. Compost Development Corporation Ltd.	18.97	18.96	18.96	46.55	53.68	50.54
3. ಕರ್ನಾಟಕ ಚಲನ ಚಿತ್ರೋದ್ಯಮ ಅಭಿವೃದ್ಧಿ ನಿಗಮ ನಿಯಮಿತ Kar. Film Industries Development Corpn. Ltd.	122.30	129.51	136.93	32.25	33.62	30.80
4. ಕರ್ನಾಟಕ ಮೀನುಗಾರಿಗೆ ಅಭಿವೃದ್ಧಿ ನಿಗಮ ನಿಯಮಿತ Kar. Fisheries Development Corporation Ltd	68.35	70.78	67.45	104.74	98.18	98.18
5. ಕರ್ನಾಟಕ ಅರಣ್ಯಾಭಿವೃದ್ಧಿ ನಿಗಮ ನಿಯಮಿತ Kar. Forest Development Corporation Ltd.	958.95	943.90	824.30	603.58	738.14	697.41
6. ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ Kar. State Handloom Development Corpn. Ltd.	3020.85	3548.64	3548.37	295.15	294.53	306.79
7. ಕರ್ನಾಟಕ ಚರ್ಮೋದ್ಯಮ ಅಭಿವೃದ್ಧಿ ನಿಗಮ ನಿಯಮಿತ Kar. Leather Industries Devp. Corporation Ltd.	210.16	200.00	241.00		119.00	100.00
8. ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿಯಮಿತ Kar. State Electronics Devp. Corporation Ltd.	354.45	267.46	444.40		285.68	130.40
9. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ Kar. State Handicrafts Devp. Corporation Ltd	107.25	108.10	107.00	70.15	68.39	77.78

1 2	3	4	5	6	7	8
10. ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ನಿಯಮಿತ Kar. State Industrial Investment and Devp., Corporation Ltd.	10406.73	12509.63	15906.00	44.75	68.37	65.68
11. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ Kar. State Small Industries Devp Corpn. Ltd	25922.84	2355.61	2345.76	108.76	249.19	360.85
12. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ Kar. State Tourism Devp. Corporation Ltd	109.11	60.16	60.00	291.11	323.60	365.20
13. ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತ Karnataka State Coir Development Corpn. Ltd.	22.76	3.51	3.38 5.00	15.79 4.13	17.65 3.68	21.25 3.15
14. ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ Kar Inland Fisheries Development Corpn Ltd						
15. ಅರಣ್ಯ ವಸತಿ ಗೃಹಗಳು ಮತ್ತು ವಿಹಾರಧಾಮಗಳು ನಿಯಮಿತ Jungle Lodges and Resorts Limited	59.86	73.22	77.01	46.35	55.33	61.84
16. ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ Kar. State Sc and ST Development Corpn. Ltd.					16.17	14.70

1 2	3	4	5	6	7	8
17. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ Kar. Backward Classes Development Corpn. Ltd				2.68	2.64	2.57
18. ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ Kar Minorities Development Corporation Ltd				2.87	2.51	3.08
19. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ Kar State Women's Development Corpn Limited		8.81	98.05	4.92	2.62	10.87
ಸೇವಾ ಉದ್ಯಮಗಳು						
20. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ನಿಯಮಿತ Kar Agro Industries Corporation Ltd	2208.36	2655.59	3185.48	481.90	411.38	332.85
21. ಕರ್ನಾಟಕ ಭೂ ಸೇನಾ ನಿಗಮ ನಿಯಮಿತ Karnataka Land Army Corporation Ltd	110.86	1367.09	1008.45	78.84 58.44	77.54 138.93	47.57 136.00
22. ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ Kar State Construction Corpn Ltd						
23. ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ Kar. State Forest Industries Corpn Ltd	30.47	30.47	30.47	164.91	155.46	147.12
24. ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತ Kar. State Police Housing Corporation Ltd	886.23	1069.95	1417.55	19.45	18.26	17.36
25. ಕರ್ನಾಟಕ ರಾಜ್ಯ ಬಿತ್ತನೆ ಬೀಜಗಳ ನಿಗಮ ನಿಯಮಿತ Kar. State Seeds Corporation Ltd	375.80	396.76	458.73	418.51	480.83	419.22

1 2	3	4	5	6	7	8
26. ಶ್ರೀಕಂಠೀರವ ಸ್ಟುಡಿಯೋಸ್ ನಿಯಮಿತ Shree Kanteerava Studios Limited	35.56	38..54	36.77	21.83	22.49	21.49
27. ಕರ್ನಾಟಕ ಟ್ರಕ್ ಟರ್ಮಿನಲ್ಸ್ ನಿಯಮಿತ Kar. Truck Terminal Limited						
28. ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮ ನಿಯಮಿತ Kar. Small Industries Marketing Corpn. Ltd	49.00	46.80	236.90	5.52	5.93	14.92
ಮಾರ್ಕೆಟಿಂಗ್ ಉದ್ಯಮಗಳು:						
29. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ Kar Food and Civil Supplies Corporation Ltd	2237.29	1477.53	1024.54	213.26	203.22	301.40
30. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮಿತ Mysore Sales International Limited	431.60	988.89	1250.01	213.48	229.53	250.87
31. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ Kar Silk Marketing Board Limited	533.43	761.24	1306.19	19.76	29.28	27.96
32. ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಅಂಡ್ ಏಜೆನ್ಸೀಸ್ ನಿಯಮಿತ Marketing Consultants and Agencies Ltd				4.64	6.21	4.58
ಉತ್ಪಾದನಾ ಉದ್ಯಮಗಳು:						
33. ಬೆಂಗಳೂರು ಪ್ರಾಣಿ ಆಹಾರ ನಿಗಮ ನಿಯಮಿತ Bangalore Animal Food Corporation Ltd	13.06			9.15	7.33	6.74
34. ಚಾಮುಂಡಿ ಮೆಷಿನ್ ಟೂಲ್ಸ್ ನಿಯಮಿತ Chamundi Machine Tools Limited	117.54	124.62	134.50			33.97

1 2	3	4	5	6	7	8
35. ಕರ್ನಾಟಕ ಇಂಪ್ಲಿಮೆಂಟ್ಸ್ ಮತ್ತು ಮೆಷೀನರೀಸ್ ಕಂಪನಿ ನಿಯಮಿತ Kar. Implements and Machineris Co. Limited	505.09	558.89	619.08	217.23	207.31	196.55
36. ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ನಿಯಮಿತ Kar. Silk Industries Corporation Ltd	3722.34	39878.9	3338.36	1817.70	1609.17	1407.34
37. ಕರ್ನಾಟಕ ಸೋಪ್ಸ್ ಮತ್ತು ಡಿಟರ್‌ಜೆಂಟ್ಸ್ ನಿಯಮಿತ Kar. Soaps and Detergents Ltd.	5485.10	6243.69	7108.37	1910.47	1716.34	1512.49
38. ಕರ್ನಾಟಕ ಅಗ್ರೋ ಕಾರನ್ ಪ್ರಾಡಕ್ಟ್ಸ್ ನಿಯಮಿತ Kar Agro Corn. Products Ltd	3.07	89.67	79.46	181.44	275.68	275.67
39. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ Kar. Vidhyuth Karkhane Ltd	346.49	258.29	418.34	175.86	164.96	439.01
40. ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತ Mysore Crome Tanning Company Limited	270.94	306.12	347.02	25.94	23.54	20.52
41. ಮೈಸೂರು ಕಾಸ್ಮೆಟಿಕ್ಸ್ ನಿಯಮಿತ Mysore Cosmetics Limited	39.07	35.42	37.55	33.58	21.55	20.51
42. ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತ Mysore Electrical Industries Limited	1187.80	1300.87	1441.29	128.88	122.25	118.87
43. ಮೈಸೂರು ಪೆಯಿಂಟ್ಸ್ ಮತ್ತು ವಾರ್ನಿಷಸ್ ನಿಯಮಿತ Mysore Paints and Varnishes Limited	84.38	77.10	65.56	20.00	25.00	18.64
44. ಮೈಸೂರು ಮಿನರಲ್ಸ್ ನಿಯಮಿತ Mysore Minerals Limited	633.46	583.26	520.86	533.15	526.92	521.40

1 2	3	4	5	6	7	8
45. ಮೈಸೂರು ಕಾಗದದ ಕಾರ್ಖಾನೆ ನಿಯಮಿತ Mysore Paper Mills Limited	19299.24 677.33	17413.75 174.97	15178.37 565.84	32008.66 673.77	277323.78 640.02	322288.68 761.04
46. ಮೈಸೂರು ಷುಗರ್ ಕಂಪನಿ ನಿಯಮಿತ Mysore Sugar Company Limited	436.93	476.87	520.49	8.58	7.60	6.39
47. ಮೈಸೂರು ತಂಬಾಕು ಕಂಪನಿ ನಿಯಮಿತ Mysore Tobacco Company Limited	17	10885.02				35.22
48. ಎನ್.ಜಿ.ಇ.ಎಫ್. ನಿಯಮಿತ N.G.E.F. Limited	463.51	414.88	559.05	1063.21	1182.67	1258.14
49. ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ Hutti Gold Mines Company Limited	131467.10	132685.55	119670.33	83877.10	100461.72	108697.83
50. ಕರ್ನಾಟಕ ವಿದ್ಯುತ್ ನಿಗಮ ನಿಯಮಿತ Karnataka Power Corporation Limited					0.87	0.87
51. ಮೈಸೂರು ಮ್ಯಾಚ್ ಕಂಪನಿ ನಿಯಮಿತ Mysore Match Company Limited	29.00	68.99	17.96	36.74	212.57	183.84
52. ಕರ್ನಾಟಕ ರಾಜ್ಯ ವನೀರ್ಸ್ ನಿಯಮಿತ Karnataka State Veneers Limited	454.43	499.26	523.73	233.33	209.57	211.65
53. ಕರ್ನಾಟಕ ಟೆಲಿಕಾಂ ನಿಯಮಿತ Karnataka Telecom Limited	384.10	513.35	599.80	8.89	5.54	4.99
54. ಕರ್ನಾಟಕ ಪಲ್ಪ್ ವುಡ್ ನಿಯಮಿತ Karnataka Pulpwood Limited						

1	2	3	4	5	6	7	8
	ವಿಶೇಷ ಕಾನೂನಿನ ಮೇರೆಗೆ ರಚಿತವಾದ ಕಂಪನಿಗಳು:						
55.	ಕರ್ನಾಟಕ ರಾಜ್ಯ ಹಣಕಾಸು ನಿಗಮ Karnataka State Finance Corporation	36147.26	43552.86	54199.76	130.95	161.48	157.00
56.	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ Karnataka State Road Transport Corporation	9832.50	9981.40	9084.72	24827.66	37763.95	40203.26
57.	ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತ Karnataka State Warehousing Corporation	199.11	314.32	386.90	643.65	726.15	691.10
58.	ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ Karnataka Electricity Board	79582.00	91972.20	10856.00	62994.00	72139.00	82554.00
	1956 ಕಂಪನಿಗಳ ಕಾಯಿದೆಯನ್ವಯ ಸರ್ಕಾರಿ ಕಂಪನಿಗಳೆಂದು ಪರಿಭಾವಿಸಿರುವ ಕಂಪನಿಗಳು						
59.	ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ ಕಂಪನಿ ನಿಯಮಿತ Mysore Acetate and Chemical Company Ltd	1246.46	1243.8			167.39	164.54
60.	ಕರ್ನಾಟಕ ಆಗ್ರೋ ಪ್ರೋಟೀನ್ಸ್ ನಿಯಮಿತ Karnataka Agro Protiens Limited	620.86	700.93	700.93	190.09	177.14	177.14
61.	ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ Mysore Lamp Works Limited	825.16	868.43	933.31	381.57	380.96	476.75
	ಒಟ್ಟು (Total)	329968.67	355222.27	365458.12	220677.49	254985.74	271221.12

ಶ್ರೀ ಸಿ. ಬೈರೇಗೌಡ:– ಮಾನ್ಯ ಉಪಾಧ್ಯಕ್ಷಿಣಿಯವರೇ ಇದು ರಾತ್ರಿ ಕಂಡಿದ್ದನ್ನು ಹಗಲು ಇಲ್ಲ ಎಂದು ಹೇಳುವುದಕ್ಕೆ ಇವರು ಹೊರಟಿದ್ದಾರೆ. ಏಕೆಂದರೆ ಇದರ ಬಗ್ಗೆ ಸಾಕಷ್ಟು ಈ ಹಿಂದೆ ಚರ್ಚೆಯಾಗಿದೆ. ಇದರ ಬಗ್ಗೆ ಸರ್ಕಾರದಿಂದ ಹೇಳಿಕೆಗಳು ಬಂದಿವೆ. ಕೆಲವು ಕಾರ್ಖಾನೆಗಳನ್ನು ಖಾಸಗೀಕರಣ ಮಾಡುತ್ತೇವೆ ಎಂದು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಇದಕ್ಕೆ ಸಂಬಂಧಪಟ್ಟಂತೆ ಒಂದು ಉಪಸಮಿತಿಯನ್ನೂ ಕೂಡ ರಚನೆ ಮಾಡಿದ್ದರು. ಆದರೂ ಕೂಡ ಇವತ್ತು 'ಇ' ಪ್ರಶ್ನೆಗೆ ಪ್ರಸ್ತುತ ಯಾವುದೂ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಇದು ಸತ್ಯಕ್ಕೆ ಬಹಳ ದೂರವಾದ ಉತ್ತರವಾಗಿದೆ. ನನಗೆ ತಿಳಿದಮಟ್ಟಿಗೆ ಎನ್.ಜಿ.ಇ.ಎಫ್. ಕಾರ್ಖಾನೆಯನ್ನು ಬಿ.ಪಿ.ಎಲ್ ಅಥವಾ ಕಿರ್ಲೋಸ್ಕರ್‌ಗೆ ವಹಿಸಿಕೊಡಬೇಕೆಂದೂ, ಇದೇ ರೀತಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್‌ನ್ನೂ ಕೂಡ ಮಾರಾಟ ಮಾಡುವ ಹಂತದಲ್ಲಿದ್ದರು. ಇದರ ವ್ಯವಹಾರವೆಲ್ಲಾ ಪೂರ್ಣವಾಗಿ ಮುಗಿದೇ ಹೋಗಿತ್ತು. ಇದೇ ರೀತಿ ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟನ್ನೂ ಕೂಡ ಹಿಂದೂಸ್ಥಾನ್ ಲಿವರ್ಸ್‌ಗೆ ಕೊಡಬೇಕೆಂದು ವ್ಯವಹಾರ ನಡೆದಿದೆ. ಈ ಉದ್ದಿಮೆಯನ್ನು ಅಂದರೆ ಈ ಕಾರ್ಖಾನೆಗಳನ್ನು ವಶಪಡಿಸಿಕೊಳ್ಳಲು ದೇಶದಲ್ಲಿರತಕ್ಕ ದೊಡ್ಡ ದೊಡ್ಡ ಉದ್ದಿಮೆಗಳವರು ರಣಹದ್ದುಗಳ ರೀತಿಯಲ್ಲಿ ಕಾಯುತ್ತಿದ್ದಾರೆ. ಇಷ್ಟಾದರೂ ಕೂಡ ಇದರ ಬಗ್ಗೆ ಮಾನ್ಯ ಮಂತ್ರಿಗಳು ಬಹಳ ಬೋಲ್ಡ್ ಆಗಿ ಉತ್ತರವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಿಜಾಂಶ ಏನೆಂಬುದನ್ನು ತಿಳಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ತಮ್ಮ ಪ್ರಶ್ನೆಗಳಿಗೆ ಉತ್ತರ ಬಹಳ ಸೂಕ್ಷ್ಮವಾಗಿದೆ. ಈ 4 ಸಾರ್ವಜನಿಕ ಉದ್ದಿಮೆಗಳನ್ನೂ ಮುಚ್ಚಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಈ 4 ಉದ್ದಿಮೆಗಳು ಯಾವುವೆಂದರೆ, ಕಿಂಕೋ, ಮೈಸೂರು ಕ್ರೋಂ ಟ್ಯಾನಿಂಗ್ ಕಂಪೆನಿ, ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಪಲ್ಪ್‌ವುಡ್ ಕಾರ್ಖಾನೆ. ಆದರೆ ಕಿಂಕೋ ಕಾರ್ಖಾನೆಯಲ್ಲಿ ನೌಕರರ ಸಮಸ್ಯೆ ಇದೆ. ಅವರಲ್ಲಿ ಅನೇಕ ಜನರು ನಮ್ಮನ್ನು ಭೇಟಿಯಾಗಿದ್ದರು. ತಮ್ಮನ್ನೂ ಭೇಟಿಯಾಗಿರಬೇಕು. ಕೆ.ಎಸ್.ಆರ್.ಟಿ.ಸಿಯವರ ಜೊತೆಯಲ್ಲಿ ನಾವು ಈಗಾಗಲೇ ಮಾತನಾಡಿದ್ದೇವೆ. ಮಾನ್ಯ ಸಾರಿಗೆ ಮಂತ್ರಿಗಳೂ ಕೂಡ ಇದರ ಬಗ್ಗೆ ಮಾತನಾಡಿ ಆ ಕಾರ್ಖಾನೆಯಲ್ಲಿರುವ ನೌಕರರನ್ನು ನಾವು ಉಪಯೋಗ ಮಾಡಿಕೊಳ್ಳಬೇಕು, ಆ ನೌಕರರನ್ನು ಮನೆಗೆ ಕಳುಹಿಸಬಾರದು ಎಂದು ಯೋಚನೆ ಮಾಡಿದ್ದಾರೆ. ಆ ನೌಕರರ ರಕ್ಷಣೆಗೆ ನಾವು ಬೇರೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಇನ್ನು ಎರಡು ಉದ್ಯಮಗಳನ್ನು ಖಾಸಗೀಕರಣ ಮಾಡಲಿಕ್ಕೆ ಸರ್ಕಾರ ನಿರ್ಣಯ ಮಾಡಿದೆ. ಕರ್ನಾಟಕ ಸೋಪ್ಸ್ ಅಂಡ್ ಡಿಟರ್‌ಜೆಂಟ್ಸ್ ಲಿಮಿಟೆಡ್ ಮತ್ತು ಮಹದೇವ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಈ ಎರಡು ಕಾರ್ಖಾನೆಗಳನ್ನು ಖಾಸಗೀಕರಣ ಮಾಡಲಿಕ್ಕೆ ನಿರ್ಧಾರ ಮಾಡಿದ್ದಾರೆ. ಆದರೆ ನಾವು ಸ್ವಲ್ಪ ವಿಚಾರ ಮಾಡುತ್ತಿದ್ದೇವೆ. ಮುಖ್ಯವಾಗಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್‌ಜೆಂಟ್ ಲಿಮಿಟೆಡ್ ಅನ್ನು ಏತಕ್ಕೆ ಬಲಪಡಿಸಲಿಕ್ಕೆ ಸಾಧ್ಯವಿಲ್ಲವೆಂಬ ವಿಚಾರವೂ ಕೂಡ ನಮ್ಮ ಒಂದು ಆಲೋಚನೆಯಲ್ಲಿದೆ. ಅದನ್ನು ಖಾಸಗೀಕರಣ ಮಾಡತಕ್ಕಂಥ ನಿರ್ಣಯವನ್ನೂ ಬಹುಶಃ ನಾವು ಪುನರ್ ಪರಿಶೀಲನೆ ಕೂಡ ಮಾಡಬಹುದು. ಇದರ ಬಗ್ಗೆ ಇನ್ನೂ ಇತ್ಯರ್ಥ ಮಾಡಲಿಲ್ಲ. ಅದನ್ನು ಸದ್ಯದಲ್ಲೇ ಇತ್ಯರ್ಥ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಉಪಾಧ್ಯಕ್ಷಿಣಿಯವರೇ, ಎನ್.ಜಿ.ಇ.ಎಫ್.ಅನ್ನು ಬಿ.ಪಿ.ಎಲ್.ಗೆ ಅಥವಾ ಕಿರ್ಲೋಸ್ಕರ್ ಕಂಪೆನಿಗೆ ಮಾರಾಟ ಮಾಡಬೇಕೆನ್ನತಕ್ಕಂಥದ್ದು ಸರ್ಕಾರದ ಪರಿಶೀಲನೆಯಲ್ಲಿದೆಯೇ ಅಥವಾ ಪ್ರಸ್ತಾವನೆಯಲ್ಲಿದೆಯೇ ? ಏತಕ್ಕೆಂದರೆ, ನನಗೆ ಗೊತ್ತಿರತಕ್ಕಂಥ

ಸುದ್ದಿಯ ಪ್ರಕಾರ ಈಗಾಗಲೇ ಕಿರ್ಲೋಸ್ಕರ್ ಮತ್ತು ಬಿ.ಪಿ.ಎಲ್. ಸಂಸ್ಥೆಯವರು ಇದನ್ನು ಕಸಿದುಕೊಳ್ಳಬೇಕು ಎನ್ನತಕ್ಕಂಥ ತೀವ್ರ ಪ್ರಯತ್ನವನ್ನು ಹಿಂದೆ ನಡೆಸಿದ್ದರು. ಮತ್ತೆ ಇದರ ಜೊತೆಗೆ ಕೆ.ಎಸ್.ಆರ್.ಟಿ.ಸಿ. ಯನ್ನೂ ಸಹ ಖಾಸಗೀಕರಣ ಮಾಡುತ್ತೇವೆನ್ನತಕ್ಕಂಥದ್ದನ್ನು ಊರೂರುಗಳಲ್ಲಿ ತಾವು ಜಾಹೀರು ಮಾಡಿದ್ದೀರಿ. ಆದರೆ ಇಲ್ಲಿ ಉತ್ತರವನ್ನು ನೋಡಿದರೆ ಅದಕ್ಕೆ ಇಲ್ಲವೆಂದು ಹೇಳುತ್ತೀರಿ. ಎನ್.ಜಿ.ಇ.ಎಫ್.ನ್ನು ಏನು ಮಾಡುತ್ತೀರಿ, ಕೆ.ಎಸ್.ಆರ್.ಟಿ.ಸಿ.ಯನ್ನು ಏನು ಮಾಡುತ್ತೀರಿ ? ತಮ್ಮ ನೀತಿ ಏನು, ಇದನ್ನು ಖಾಸಗೀಕರಣ ಮಾಡುವುದರ ಬಗ್ಗೆ ತಮ್ಮ ನೀತಿ ಏನು ಎನ್ನತಕ್ಕಂಥದ್ದನ್ನು ದಯವಿಟ್ಟು ತಿಳಿಸಿ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಉಪಾಧ್ಯಕ್ಷೆಣಿಯವರೇ, ಎನ್.ಜಿ.ಇ.ಎಫ್.ನ್ನು ಖಾಸಗೀಕರಣ ಮಾಡತಕ್ಕಂಥ ಆಲೋಚನೆ ಸರ್ಕಾರದಲ್ಲಿ ಇಲ್ಲ. ಒಂದು ವಿಚಾರದಲ್ಲಿ ನಾವು ಯಾವಾಗಲೂ ಎಕ್ಸ್‌ಟ್ರೀಮ್ ವ್ಯೂಸ್ ತೆಗೆದುಕೊಳ್ಳುತ್ತೇವೆ. ಅದು ಯಾವುದೆಂದರೆ, ಸರ್ಕಾರವೇ ನಡೆಸುವುದು ಅಥವಾ ಖಾಸಗೀಕರಣ ಮಾಡುವುದು. ಇದರ ಮಧ್ಯೆ ಬಂಡವಾಳ, ಸಂಪನ್ಮೂಲ ಬೇಕಾದರೆ ಅಥವಾ ಒಂದು ತಾಂತ್ರಿಕವಾದಂಥ ಬೆಂಬಲ ಕೊಡಬೇಕಾದರೆ ಸಾಕಷ್ಟು ಮಾರ್ಕೆಟ್‌ನಲ್ಲಿ ನಮಗೆ ಸಿಗುವಂತಿರಬೇಕು. ಸಾರ್ವಜನಿಕ ರಂಗದಲ್ಲಿರತಕ್ಕಂಥ ಕಾರ್ಖಾನೆಗಳಿಂದ ಉತ್ಪಾದನೆಯಾಗತಕ್ಕಂಥವುಗಳಿಗೆ ಮಾರ್ಕೆಟ್ ಸಿಕ್ಕಿದರೆ ನಾವು ಸಂಪನ್ಮೂಲವನ್ನು ಎತ್ತಲಿಕ್ಕೆ ಸಾಧ್ಯವಾಗುತ್ತದೆ. ಇದನ್ನು ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ಏತಕ್ಕೆಂದರೆ ಕೇಂದ್ರ ಸರ್ಕಾರ ಕೂಡ ಏನು ಅವರ ಒಂದು ಮುಖ್ಯ ಉದಾತ್ತ ನೀತಿಯನ್ನು ಉದ್ಯಮದ ವಿಚಾರದಲ್ಲಿ ತೆಗೆದುಕೊಂಡಿರುತ್ತಾರೆ ಅದು ಬರೇ ಖಾಸಗೀಕರಣವೇ ಉತ್ತರವಲ್ಲ. ಖಾಸಗೀಕರಣದಲ್ಲಿ ಅದೆಲ್ಲ ಕೊಚ್ಚಿಕೊಂಡು ಹೋಗತಕ್ಕಂಥ ಪ್ರವೃತ್ತಿಯನ್ನು ಕೂಡ ಬಹುಶಃ ನಾನು ವೈಯಕ್ತಿಕವಾಗಿ ಒಪ್ಪುವುದಿಲ್ಲ. ಸರ್ಕಾರ ಕೂಡ ಇದರ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಕೇಂದ್ರದ ಧೋರಣೆಯೂ ಕೂಡ ಅದೇ ಆಗಿದೆ. ನಾವು ಅದನ್ನು ಭದ್ರಗೊಳಿಸಲಿಕ್ಕೆ ಎಷ್ಟು ಸಾಧ್ಯವಿದೆ ಅಷ್ಟು ಸಂಪನ್ಮೂಲಗಳನ್ನು ಒದಗಿಸಬೇಕಾಗುತ್ತದೆ. ಟೆಕ್ನಿಕಲ್ ಪವರ್, ಮ್ಯಾನ್‌ಪವರ್ ಎಲ್ಲವನ್ನು ಒದಗಿಸಬೇಕಾಗುತ್ತದೆ. ಏತಕ್ಕೆಂದರೆ ನನಗೆ ನೆನಪಿದೆ, ನಾನು ಸಣ್ಣ ಕೈಗಾರಿಕಾ ಮಂತ್ರಿಯಾಗಿದ್ದಾಗ ನಾವು ಒಂದು ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಎಂದು ಮಾಡಿದ್ದೆವು. ತನ್ಮೂಲಕ ತಾಂತ್ರಿಕವಾದಂಥ ಮಾನವ ಸಂಪನ್ಮೂಲ ಏನಿದೆ ಅದನ್ನು ಒದಗಿಸತಕ್ಕಂಥದ್ದನ್ನು ಮಾಡಬೇಕು. ಕೇಂದ್ರಸರ್ಕಾರದಲ್ಲಿರತಕ್ಕಂಥ ಬ್ಯೂರೋ ಪ್ರಕಾರ, ಅದೇ ಮಾದರಿಯಲ್ಲಿ ಬ್ಯೂರೋ ಮಾಡಿದ್ದೇವೆ. ಆದರೆ ಅದರ ಉದ್ದೇಶ ಬೇರೆಯಾಗಿದೆ. ನಿಜವಾಗಿಯೂ ನಮಗೆ ಬೇಕಾದಂಥ ಅಧ್ಯಕ್ಷರಾಗಲಿ ಅಥವಾ ತಾಂತ್ರಿಕ ತಜ್ಞರಾಗಲಿ, ಕಾರ್ಯನಿರ್ವಾಹಕರಾಗಲಿ, ಮ್ಯಾನೇಜಿಂಗ್ ಡೈರೆಕ್ಟರ್ಸ್ ಆಗಲಿ ನಮಗೆ ತಂತ್ರಜ್ಞರು ಬೇಕಾಗಿದ್ದಾರೆಯೇ ಹೊರತು ತಂತ್ರಜ್ಞರಿಲ್ಲದೆ ನಡೆಸುವುದರಿಂದ ಕೆಲವು ಸಾರಿ ತಾಪತ್ರಯ, ತೊಂದರೆಗಳು ಬರುತ್ತವೆ. ಆದ್ದರಿಂದ ಕೇಂದ್ರ ಸರ್ಕಾರದ ಬ್ಯೂರೋ ಏನು ಇದೆ ಆ ಮಾದರಿಯಲ್ಲಿಯೇ ಮಾಡಬೇಕಾಗುತ್ತದೆ. ಎರಡನೆಯದಾಗಿ ತಂತ್ರಜ್ಞತೆ ಒಂದು ಕಡೆ, ಮಾನವ ಸಂಪನ್ಮೂಲ ಮತ್ತು ಹೆಚ್ಚು ಹಣದ ಬಂಡವಾಳವನ್ನು ಒದಗಿಸತಕ್ಕಂಥ ದೃಷ್ಟಿಯಲ್ಲಿಯೂ ಕೂಡ ಕೆಲವು ವಿಚಾರಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ ಈ ಸಮಸ್ಯೆಗೆ ಖಾಸಗೀಕರಣವೇ ಉತ್ತರವಲ್ಲ. ಆ ದೃಷ್ಟಿಯಲ್ಲಿ ಬಹಳ ನಷ್ಟದಲ್ಲಿ ನಡೆಯತಕ್ಕಂಥ ಕೈಗಾರಿಕೆಗಳನ್ನು ನಾವು ಮುಂದೆ ನಡೆಸಿಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಒಂದು ರೀತಿ ತಾಳಮೇಳ ನಾವು ಮಾಡಬೇಕಾಗುತ್ತದೆ. ಏತಕ್ಕೆಂದರೆ ನಮ್ಮ ಕರ್ನಾಟಕ ರಾಜ್ಯ ಸಾರ್ವಜನಿಕ ರಂಗದಲ್ಲಿ ಅತ್ಯಂತ ಶ್ರೇಷ್ಠವಾದಂಥ ಉದ್ಯಮದ ವ್ಯಕ್ತಿತ್ವ ಇದೆ. ಆ ಉದ್ಯಮದ ವ್ಯಕ್ತಿತ್ವವನ್ನು ನಾವು ಉಳಿಸಿಕೊಂಡು ಹೋಗಬೇಕು. ಬೆಳೆಸಿಕೊಂಡು ಹೋಗಬೇಕೆ ಹೊರತು ಆ ಪರಂಪರೆಯನ್ನು ಬಿಟ್ಟು ಅದನ್ನು ಕರಗಿಸಿ ಕರಗಿಸಿಕೊಂಡು ಬೇರೆ ದಾರಿಗೆ

ಹೋಗಬೇಕೆನ್ನುವುದನ್ನು ಕೂಡ ವೈಯಕ್ತಿಕವಾಗಿಯಾಗಲಿ, ನಮ್ಮ ಸರ್ಕಾರದ್ದಾಗಲಿ ಇಚ್ಛೆಯಲ್ಲ. ಅದರ ಬಗ್ಗೆ ತಾವು ಏನು ಹೇಳಿದ್ದೀರಿ. ಅದರ ಬಗ್ಗೆ ಸ್ಪಷ್ಟವಾದಂಥ ನೀತಿಯನ್ನು ಮುಂದೆ ಬರತಕ್ಕಂಥ ದಿವಸಗಳಲ್ಲಿ ನಾವು ಪ್ರಕಟಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ:– ಈಗಿರತಕ್ಕ ಸಾರಿಗೆ ಸಚಿವರು ಸಹ ಇತ್ತೀಚೆಗೆ ಹೇಳಿಕೆ ಕೊಟ್ಟಿದ್ದಾರೆ. ಕೆ.ಎಸ್.ಆರ್.ಟಿ.ಸಿ.ಯನ್ನು ಖಾಸಗೀಕರಣ ಮಾಡಬೇಕೇ ಬಿಡಬೇಕೇ ಎಂಬುದು ಸರ್ಕಾರ ಪರಿಶೀಲನೆಯಲ್ಲಿದೆ ಎಂದು ಅವರು ಹೇಳಿದ್ದಾರೆ. ಅದರ ಬಗ್ಗೆ ತಾವು ಏನು ನಿರ್ಧಾರ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ:– ರಸ್ತೆ ಸಾರಿಗೆ ನಿಗಮವನ್ನು ಖಾಸಗೀಕರಣ ಮಾಡಬೇಕೆಂಬುದು ಹಿಂದಿನ ಸರ್ಕಾರದ ಧೋರಣೆಯೂ ಅಲ್ಲ, ಈಗಿನ ಸರ್ಕಾರದ ಧೋರಣೆಯೂ ಅಲ್ಲ. ಈಗ ಪ್ರಶ್ನೆ ಏನೆಂದರೆ, ಕೆ.ಎಸ್.ಆರ್.ಟಿ.ಸಿ.ಯವರಿಗೆ ಎಷ್ಟು ಶಕ್ತಿ ಇದೆ, ಎಷ್ಟು ರೂಟ್‌ಗಳನ್ನು ಮ್ಯಾನೇಜ್ ಮಾಡಲಿಕ್ಕೆ ಸಾಧ್ಯವಿದೆ ಎಂಬುದು. ಕೆಲವು ಏರಿಯಾವನ್ನು ಖಾಸಗೀಕರಣ ಮಾಡಿ ಅನೇಕ ಕಡೆ ಬಸ್ ಓಡಿಸಲಿಕ್ಕೆ ಆಗುತ್ತಿಲ್ಲ. ರಸ್ತೆ ಸಾರಿಗೆ ನಿಗಮವನ್ನು ಭದ್ರಪಡಿಸಬೇಕು, ಸುಭದ್ರವಾಗಿ ನಡೆಸಬೇಕು; ಸಾರ್ವಜನಿಕರ ಹಿತದೃಷ್ಟಿ ಒಂದು ಕಡೆ ಇರಬೇಕಾಗುತ್ತದೆ. ಬರೀ ನಿಗಮದ ಹಿತದೃಷ್ಟಿಯನ್ನು ನೋಡಿದರೆ ಮಾತ್ರ ಸಾಲದು. ನಾಳೆ ಕಮ್ಯೂಟರ್ಸ್ ಪ್ಯಾಸೆಂಜರ್ಸ್ ಏನಿದ್ದಾರೆ ಅವರ ದೃಷ್ಟಿಯನ್ನೂ ನೋಡಬೇಕಾಗುತ್ತದೆ. ರೂಟ್ ಖಾಸಗೀಕರಣದ ವಿಚಾರ ಪ್ರತ್ಯೇಕ. ಆದರೆ ನಿಗಮವನ್ನು ಖಾಸಗೀಕರಣ ಮಾಡತಕ್ಕ ಪ್ರಶ್ನೆ ಸರ್ಕಾರದ ಮುಂದೆ ಹಿಂದೆಯೂ ಇರಲಿಲ್ಲ, ಇಂದೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್:– ರೂಟ್‌ಗಳನ್ನು ಖಾಸಗೀಕರಣ ಮಾಡಿದರೆ ಅದರ ಕಥೆ ಮುಗಿಯಿತು. ಸಂಸ್ಥೆಗೆ ಲಾಭ ಬರುವುದಿಲ್ಲ, ಕೊನೆಗೆ ಕೆ.ಎಸ್.ಆರ್.ಟಿ.ಸಿ.ಯನ್ನು ಮುಚ್ಚಬೇಕಾಗುತ್ತದೆ. ತಮ್ಮ ಸರ್ಕಾರದ ನೀತಿ ರಾಷ್ಟ್ರೀಕರಣದ ಪರವಾಗಿದೆಯೇ ಅಥವಾ ವಿರುದ್ಧವಾಗಿದೆಯೇ ಎನ್ನುವುದು ತೀರ್ಮಾನವಾಗಬೇಕು. ಒಂದು ಕಡೆ ರಾಷ್ಟ್ರೀಕರಣವೆಂದು ಹೇಳುತ್ತೀರಿ. ಇನ್ನೊಂದು ಕಡೆ ಖಾಸಗೀಕರಣವೆಂದು ಹೇಳುತ್ತೀರಿ. ಆದ್ದರಿಂದ ದಯವಿಟ್ಟು ತಮ್ಮ ನಿಲುವು ಯಾವುದು ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಒಂದು ಗಾಡಿ ಕೆಟ್ಟರೆ ಮತ್ತೊಂದು ಗಾಡಿಯನ್ನು ಕೊಡುವುದಿಲ್ಲ. ಖಾಸಗೀಕರಣ ಮಾಡಿದರೆ ಸಾವಿರಾರು ಜನ ಕಾರ್ಮಿಕರು ತಮ್ಮ ಪರಿಸ್ಥಿತಿ ಏನು, ನಮ್ಮ ಹಣೇಬರಹ ಏನು ಎಂದು ಇದ್ದಾರೆ. ದಯವಿಟ್ಟು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಬೇಕು. ಖಾಸಗೀಕರಣದ ಬಗ್ಗೆ ಸ್ಪಷ್ಟವಾದ ನಿಲುವು ಇರಬೇಕು. ರೂಟ್‌ಗಳನ್ನು ಖಾಸಗೀಕರಣ ಮಾಡುತ್ತೇವೆ, ಇದನ್ನು ಹಾಗೇ ಇಟ್ಟುಕೊಂಡಿರುತ್ತೇವೆ ಅಂದರೆ ದ್ವಂದ್ವ ಆಗುತ್ತದೆ. ನಾನು ಬಿಚ್ಚು ಮನಸ್ಸಿನಿಂದ ಮಾತನಾಡುತ್ತಿದ್ದೇನೆ. ತಾವು ದಾರಿ ತಪ್ಪಬೇಡಿ. ಸಂಪೂರ್ಣ ಖಾಸಗೀಕರಣ ಮಾಡುವುದರಿಂದ ಇಡೀ ಕಾರ್ಮಿಕರು ಬೀದಿ ಪಾಲಾಗುತ್ತಾರೆ. ಆದ್ದರಿಂದ ಇದರ ಬಗ್ಗೆ ಸರ್ಕಾರದ ನೀತಿ ಏನು ?

ಪ್ರೊ. ಎಂ.ಡಿ. ನಂಜುಂಡ ಸ್ವಾಮಿ:– ದೇಶಪಾಂಡೆಯವರನ್ನು ಕರೆದಾಗ ಕೊನೇ ಪ್ರಶ್ನೆ ಎಂದು ಹೇಳುತ್ತಿದ್ದಿರಿ. ಇದು ಬಹಳ ಮುಖ್ಯವಾದ ಪ್ರಶ್ನೆಯಾದುದರಿಂದ ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್:– ಅರ್ಧ ಗಂಟೆ ಚರ್ಚೆ ಬಗ್ಗೆ ಗೊತ್ತಿದೆ. ಸರ್ಕಾರದ ನಿಲುವು ಏನು ? ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:– ನಮ್ಮ ನಿಲುವು ನಮ್ಮ ಇರಾದೆ ಏನೆಂದರೆ, ಎಲ್ಲಿ ನಮ್ಮ ಸಾರ್ವಜನಿಕ ರಂಗದ ಉದ್ದಿಮೆಗಳಿವೆ ಅದು ಕೆ.ಎಸ್.ಆರ್.ಟಿ.ಸಿ. ಇರಬಹುದು ಮತ್ತೊಂದು

ಇರಬಹುದು ಅದನ್ನು ಭದ್ರಪಡಿಸುವುದೇ ನಮ್ಮ ಸ್ಪಷ್ಟವಾದ ನಿಲುವು. ಹಿಂದಿನ ಸರ್ಕಾರದಲ್ಲಿ ನಾವು ಇರುವಾಗ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದೇವೆ. ಕ್ಯಾಬಿನೆಟ್ ಸಬ್ ಕಮಿಟಿ ಆಗಿದೆ, ಎಲ್ಲಾ ಆಗಿದೆ. ಇದರಲ್ಲಿ ಬೇರೆ ಬೇರೆ ಪ್ರಕಾರಗಳು ಇವೆ. ರಸ್ತೆ ಸಾರಿಗೆ ನಿಗಮದ ವಿಚಾರ ಇದೆ. ಬೇರೆ ಬೇರೆ ಉದ್ದಿಮೆಗಳು, ಸಾರ್ವಜನಿಕ ರಂಗವನ್ನು ಭದ್ರಪಡಿಸತಕ್ಕದ್ದು, ಖಾಸಗೀಕರಣದ ವಿಚಾರ ಎಲ್ಲಾ ಇದೆ. ಆದುದರಿಂದ ಇದು ಬಹಳ ವ್ಯಾಪಕವಾದ ವಿಚಾರ. ಈಗ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ರಸ್ತೆ ಸಾರಿಗೆ ನಿಗಮವನ್ನು ಭದ್ರಗೊಳಿಸಿ, ಸಾರ್ವಜನಿಕ ರಂಗವನ್ನು.....

ಶ್ರೀ ವಾಟಾಳ್ ನಾಗರಾಜ್:– ರಸ್ತೆ ಸಾರಿಗೆ ನಿಗಮವನ್ನು ಖಾಸಗೀಕರಣ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ: ರಸ್ತೆ ಸಾರಿಗೆ ನಿಗಮವನ್ನು ಖಾಸಗೀಕರಣ ಮಾಡತಕ್ಕ ಪ್ರಶ್ನೆ ಉದ್ಭವವಾಗುವುದಿಲ್ಲ.

ಉಪಾಧ್ಯಕ್ಷಿಣಿಯವರು:– ಇನ್ನೂ 3 ಪ್ರಶ್ನೆಗಳಿವೆ. ಹೆಚ್ಚು ಸಮಯ ತೆಗೆದುಕೊಂಡರೆ ಅವು ಲ್ಯಾಪ್ಸ್ ಆಗುತ್ತವೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಸಭಾನಾಯಕರು, ಹಿಂದಿನ ಸರ್ಕಾರ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ಸ್ ಮತ್ತು ಮಹದೇವ ಟೆಕ್ಸ್‌ಟೈಲ್ ಮಿಲ್ಸ್ ಇವುಗಳನ್ನು ಖಾಸಗೀಕರಣ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿತ್ತು; ಆದರೆ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಬಗ್ಗೆ ಪುನರ್ ಪರಿಶೀಲನೆ ನಡೆಯುತ್ತಿದೆ ಎಂದು ಹೇಳಿದರು. ಹಾಗಾದರೆ ಮಹದೇವ್ ಟೆಕ್ಸ್‌ಟೈಲ್ ಮಿಲ್ ಖಾಸಗೀಕರಣ ಆಗುತ್ತದೆಂದು ಅರ್ಥವಾಯಿತು. ನಮ್ಮ ಸರ್ಕಾರ ಇದ್ದಾಗ ಮಹದೇವ್ ಟೆಕ್ಸ್‌ಟೈಲ್ ಮಿಲ್ಸ್ ಖಾಸಗೀಕರಣ ಮಾಡುವುದಕ್ಕೆ ಒತ್ತಾಯ ಬಂತು. ನಾವು ಮಾಡಿಲ್ಲ. ಅಲ್ಲಿ ಸಾಕಷ್ಟು ವ್ಯಾಲ್ಯುಯಬಲ್ ಪ್ರಾಪರ್ಟಿ, ಕೋಟ್ಯಾಂತರ ರೂಪಾಯಿ ಬಾಳುವ ಪ್ರಾಪರ್ಟಿ ಇದೆ. 30 ಎಕರೆ ಲ್ಯಾಂಡ್ ಹುಬ್ಬಳ್ಳಿ ಸಿಟಿಯಲ್ಲಿ ಇದೆ. ಅಲ್ಲಿರತಕ್ಕ ಸಮಸ್ಯೆ ಏನೆಂದರೆ, ಯಂತ್ರಗಳು ಹಳೆಯವಾಗಿವೆ, ಕಾರ್ಮಿಕರಿಗೆ ತರಪೇತಿ ಇಲ್ಲ. ಹೀಗಾಗಿ ಎರಡು ವಿಚಾರದಲ್ಲಿ ತಾವು ಕ್ರಮ ತೆಗೆದುಕೊಂಡರೆ, ಹಣ ಇನ್‌ವೆಸ್ಟ್ ಮಾಡಿದರೆ ಅದು ವಯಬಲ್ ಯೂನಿಟ್ ಆಗುತ್ತದೆ. ಆದುದರಿಂದ ಅದನ್ನು ಖಾಸಗೀಕರಣ ಮಾಡಬಾರದು ಎಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಉಪಾಧ್ಯಕ್ಷರೇ, ಮಹದೇವ್ ಟೆಕ್ಸ್‌ಟೈಲ್ ಮಿಲ್ಸ್ ಬಗ್ಗೆ ನಿರ್ಣಯ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಹಿಂದಿನ ಸರ್ಕಾರಕ್ಕೂ, ಇಂದಿನ ಸರ್ಕಾರಕ್ಕೂ ವ್ಯತ್ಯಾಸವೇನಿಲ್ಲ. ಹಿಂದಿನ ಸರ್ಕಾರವೇ ಇಂದಿನ ಸರ್ಕಾರ. ಹಿಂದಿನ ಸರ್ಕಾರ ಬೇರೆ, ನಮ್ಮ ಸರ್ಕಾರ ಬೇರೆಯಲ್ಲ. ಹಿಂದಿನ ಸರ್ಕಾರ ಕೂಡ ನಮ್ಮ ಸರ್ಕಾರ. ಇವತ್ತಿನ ಸರ್ಕಾರ ಕೂಡ ನಮ್ಮದೇ ಸರ್ಕಾರ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ನೀವು ಪ್ರಾಮಾಣಿಕವಾಗಿ ಹೇಳುತ್ತಿದ್ದೀರಾ ?

(ಗೊಂದಲ)

ಶ್ರೀ ಸಿ. ಬೈರೇಗೌಡ:– ಹಾಗಿದ್ದರೆ ಈಗ ಈ ಮುಖ್ಯಮಂತ್ರಿಗಳು ಮಾಡಿರತಕ್ಕ ಮೇಜರ್ ಸರ್ಜರಿ ಯಾವುದು ?

ಶ್ರೀ ವಾಟಾಳ್ ನಾಗರಾಜ್:– ಈಗಿನ ಮುಖ್ಯಮಂತ್ರಿಗಳು ಹೇಳಿದ ಮಾತು ಪ್ರಾಮಾಣಿಕತೆಯಿಂದ ಕೂಡಿದೆಯೇ ? ಹೃದಯ ಬಿಚ್ಚಿ ಹೇಳುತ್ತಿದ್ದಾರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ:– ಕರ್ನಾಟಕ ರಾಜ್ಯದ ಜನ ಆಶೀರ್ವಾದ ಮಾಡಿ 1989ರಲ್ಲಿ ನಮ್ಮನ್ನು ಕಳುಹಿಸಿದ್ದಾರೆ. ಆ ಸರ್ಕಾರವೇ ಇವತ್ತು ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಾಗಿದ್ದರೆ ಆ ಸರ್ಕಾರದ ಪಾಪಕ್ಕೆ ತಾವೇ ಹೊಣೆ ಹೊರುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಪಾಪ ಪುಣ್ಯ ಎಲ್ಲದಕ್ಕೂ ನಾವು ಹೊಣೆಯೆ. ಮಹದೇವ ಟೆಕ್ಸ್‌ಟೈಲ್ ಮಿಲ್ಸ್ ಮತ್ತು ಸೋಪ್ಸ್ ಅಂಡ್ ಡಿಟರ್ಜೆಂಟ್ ಬಗ್ಗೆ ಕೇಳಿದ್ದೀರಿ. ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಬಗ್ಗೆ ಮೊದಲೇ ತಿಳಿಸಿದ್ದು, ಮಹದೇವ್ ಟೆಕ್ಸ್‌ಟೈಲ್ ಮಿಲ್ಸ್ ವಿಚಾರದಲ್ಲಿ ಪುನರ್ ವಿಮರ್ಶೆ ಮಾಡುತ್ತೇವೆ.

ತುರುವೇಕೆರೆ ತಾಲ್ಲೂಕು ಮುನಿಯೂರು ನೇಕಾರರ ಸಂಘಕ್ಕೆ ಮನೆಗಳ ಮಂಜೂರು.

(431) ಶ್ರೀ ಎಸ್. ರುದ್ರಪ್ಪ, (ತುರುವೇಕೆರೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುರುವೇಕೆರೆ ನೇಕಾರ ಸಂಘಕ್ಕೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ ?

ಆ) ಹಾಗಿದ್ದಲ್ಲಿ ಮಂಜೂರು ಆಗಿದ್ದು ಯಾವಾಗ ?

ಇ) ಮನೆಗಳ ನಿರ್ಮಾಣ ಕಾರ್ಯವು ಪೂರ್ಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದರೆ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು)

ಅ) 21 ಮನೆಗಳು

ಆ) 1) 1988–89ನೇ ಸಾಲಿನಲ್ಲಿ ಸದರಿ ಸಂಘಕ್ಕೆ 10 ವಸತಿ ಮತ್ತು ಕಾರ್ಯಾಗಾರಗಳನ್ನು ಕಾರ್ಯ ನಿರ್ವಾಹಕರು (ಖಾಗ್ರಾ) ಜಿಲ್ಲಾ ಪರಿಷತ್ತು, ತುಮಕೂರು ಇವರ ಕಛೇರಿ, ಆದೇಶ ಸಂಖ್ಯೆ:ಜಿಪತು:ಕೆವಿಐ:ಹೆಚ್‌ಸಿಡಬ್ಲ್ಯು:611 ಎ) 88-89 ದಿನಾಂಕ 31.12.88 ಮಂಜೂರು ಮಾಡಲಾಗಿದೆ.

2) 1989–90ನೇ ಸಾಲಿನಲ್ಲಿ ಸದರಿ ನೇಕಾರ ಸಂಘಕ್ಕೆ 5 ವಸತಿ ಮತ್ತು ಕಾರ್ಯಾಗಾರಗಳನ್ನು 5 ವಸತಿ ಮತ್ತು ಕಾರ್ಯಾಗಾರಗಳನ್ನು ನಿರ್ಮಿಸಲು ಕಾರ್ಯ ನಿರ್ವಾಹಕರು (ಖಾಗ್ರಾ) ಜಿಲ್ಲಾ ಪರಿಷತ್ ತುಮಕೂರು ಇವರ ಕಛೇರಿ ಆದೇಶ ಸಂಖ್ಯೆ:ಜಿಪತು:ಕೆವಿಐ:ಹೆಚ್‌ಸಿಡಬ್ಲ್ಯು:ಮುನಿಯಾರ್:364: 89–90 ದಿನಾಂಕ 31–10–89ರಲ್ಲಿ ಮಂಜೂರು ಮಾಡಲಾಗಿದೆ.

3) 1991–92ನೇ ಸಾಲಿನಲ್ಲಿ ಸದರಿ ಸಂಘಕ್ಕೆ 6 ವಸತಿ ಮತ್ತು ಕಾರ್ಯಾಗಾರಗಳನ್ನು ನಿರ್ಮಿಸಲು ಕಾರ್ಯ ನಿರ್ವಾಹಕರು (ಖಾದಿ ಗ್ರಾಮೋದ್ಯೋಗ) ಜಿಲ್ಲಾ ಪರಿಷತ್, ತುಮಕೂರು ಇವರ ಕಛೇರಿ ಆದೇಶ ಸಂಖ್ಯೆ: ಜಿಪತು:ಕೆವಿಐ: ಹೆಚ್‌ಸಿಡಬ್ಲ್ಯು:175:91–92 ದಿನಾಂಕ 28–3–92ರಲ್ಲಿ ಮಂಜೂರು ಮಾಡಲಾಗಿದೆ.